


ಗುಡರ್‌ವೀಲ್ ಪಟ್ಟಣದಲ್ಲಿ ಆವತ್ತು ವಾರದ ಸಂತೆ. ಹಾಗಾಗಿ, ಆ ಪ್ರಾಂತ್ಯದ ಸುತ್ತಮುತ್ತಲ ರಸ್ತೆಗಳ ತುಂಬಾ ಇತ್ತ ಕಡೆಯೇ ಧಾವಿಸಿ ಬರುತ್ತಿದ್ದ ರೈತಾಪಿ ಜನರ ದಂಡಿನ ಜೊತೆಜೊತೆಗೆ ಅವರವರ ಹೆಂಡಿರು ಮಕ್ಕಳು ಮತ್ತು ಜಾನುವಾರುಗಳ ಹಿಂಡು ಹಿಂಡು! ಗಂಡಸರದು ಸಾವಕಾಶ ನಡಿಗೆ. ನೇಗಿಲು ಹೊತ್ತು ಹೊತ್ತು ಅವರ ಕಾಲುಗಳು ತಿರುಚಿಕೊಂಡಿದ್ದವು. ಅತಿ ಶ್ರಮದ ಫಲವಾಗಿ ಶರೀರವೇ ಒಂದು ಬಗೆಯಲ್ಲಿ ಹೊರಳಿಕೊಂಡಂತಿದ್ದು, ಎಡಭುಜ ನಸುವೆ ಮೇಲೆತ್ತಿಕೊಂಡಿತ್ತು. ಗಂಜಿ ಹಾಕಿದ್ದರಿಂದ ಅವರ ಅಂಗಿಗಳು ಮಾತ್ರ ಫಳಫಳನೆ ಹೊಳೆಯುತ್ತಿದ್ದವು. ಆದರೆ, ಪಾಪ ಆ ದೊಗಳೆ ಅಂಗಿಗಳು ಬಡ ರೈತರ ಎಲುಬುಗೂಡಿನಂತಹ ಶರೀರಗಳ ಮೇಲೆ ಊದಿಕೊಂಡಂತೆ ಕಂಡುಬಂದು, ಇನ್ನೇನು ಗಾಳಿಯಲ್ಲಿ ಅವರನ್ನು ಮೇಲೆತ್ತಿ ಹಾರಿಸಿ ಬಿಡಲು ಸಿದ್ಧವಾಗಿರುವ ಬಲೂನುಗಳೋ ಏನೋ ಅನ್ನುವಂತೆ ಭಾಸವಾಗುತ್ತಿದ್ದವು.

ಗಂಡಸರಲ್ಲಿ ಕೆಲವರು ಹಸುವನ್ನೋ ಕರುವನ್ನೋ ಅದರ ಮೂಗುದಾರ ಹಿಡಿದು ಮುಂದೆ ಮುಂದೆ ಸಾಗುತ್ತಿದ್ದರೆ, ಅವುಗಳ ಹಿಂದೆಯೇ ಬರುತ್ತಿದ್ದ ಅವರ ಮಡದಿಯರು ಸಣ್ಣಕಡ್ಡಿಯೊಂದರಿಂದ ಆ ಪ್ರಾಣಿಯ ನಡುವಿಗೆ ಮೆಲ್ಲಮೆಲ್ಲಗೆ ಬಡಿದು ಅವು ಬೇಗ ಬೇಗ ಮುಂದೆ ಮುಂದೆ ನಡೆಯುವಂತೆ ಮಾಡುತ್ತಿದ್ದರು. ಈ ರೈತ ಮಹಿಳೆಯರ ಬೆನ್ನಮೇಲೆ ಹೂ ಚೆಂಡಿನಂಥ ಕೋಳಿ ಪಿಳ್ಳೆಗಳು ತುಂಬಿದ ದೊಡ್ಡ ದೊಡ್ಡ ಬುಟ್ಟಿಗಳೂ ಇದ್ದವು. ಆ ಪುಟ್ಟಿಗಳಿಂದ ಅಲ್ಲಲ್ಲಿ ಒಂದೆರಡು ಕೋಳಿ, ಬಾತುಕೋಳಿ ಮರಿಗಳು ತಮ್ಮ ಮುದ್ದು ಕುತ್ತಿಗೆಗಳನ್ನು ಹೊರಚಾಚಿ ಪಿಳಿಪಿಳಿ ನೋಡುತ್ತಿದ್ದವು.

ಹೆಂಗಳೆಯರ ನಡಿಗೆ ಪುರುಷರದಕ್ಕಿಂತ ಚುರುಕಾಗಿತ್ತು. ಒಂದಿಷ್ಟೂ ಮಾಟವಿಲ್ಲದೆ ಸಮತಟ್ಟಾದ ಕೃಶ ವೃಕ್ಷಸ್ಥಲದ ಮೇಲೆ ಸಾಲೂ ಸಾಲದಂತಿರುವ ಪುಟ್ಟ ಶಾಲೊಂದನ್ನು ಬಿಗಿದು ಹೇಗೋ ದೇಹಗಳನ್ನು ಮುಚ್ಚಿಕೊಂಡಿದ್ದರು. ಅಚ್ಚ ಬಿಳಿಯ ಚೌಕ ಒಂದನ್ನು ತಲೆಗೆ ಕಟ್ಟಿ ಅದರ ಮೇಲೆ